ಹೇಗೆ ಸಾಮಾನ್ಯ ಹುಡುಗಿಯಲ್ಲಿಯೂ ಸಂಗೀತ ತನ್ನ ಬೆಲೆಯನ್ನು ಪಡೆದುಕೊಳ್ಳುತ್ತದೆ ಎಂದು ನಾನು ತಬ್ಬಿಬ್ಬಾಗಿ ಯೋಚಿಸಿದೆ. ಮ್ಯಾಗಿ ಅತ್ಯಂತ ಕಷ್ಟವಾದ ರಾಗವನ್ನು ಸುಮಧುರವಾಗಿ ನುಡಿಸಿ ಹೃದಯ ಗೆದ್ದಳು. ನನಗೆ ಅನಿಸಿತು– ಒಬ್ಬ ಕಲ್ಕತ್ತಾದ ಸುಸಂಸ್ಕೃತ ವಕೀಲರ ಮಗಳು ಅಥವಾ ಖ್ಯಾತ ವ್ಯಕ್ತಿ ಅವಳ ವಯಸ್ಸಿನಲ್ಲಿ ನುಡಿಸಿದ್ದೇ ಆಗಿದ್ದರೆ ಅದೊಂದು ಅಲ್ಲಿ ಹರ್ಷದಾಯಕ ಸಂಗತಿಯಾಗುತ್ತಿತ್ತು.

'ಅದನ್ನು ನೀನೆ ಸ್ವತಃ ಕಲಿತೆಯಾ?' ಎಂದು ವಂದಿಸುತ್ತಾ ಮ್ಯಾಗಿಯನ್ನು ಕೇಳಿದೆ. 'ಇಲ್ಲ ಅದನ್ನು ನಾನು ಸ್ವತಃ ಕಲಿತಿಲ್ಲ. ನಮ್ಮ ಚರ್ಚಿನ ಒಬ್ಬ ಅಧಿಕಾರಿಯ ಮಗಳು ಸಹಾಯ ಮಾಡಿದ್ದಾಳೆ. ನೀವು ಒಪೆರಾ ಬಗ್ಗೆ ಕೇಳಿದ್ದೀರಾ.'

'ಇಲ್ಲ ನಾನು ಒಪೆರಾ ಬಗ್ಗೆ ಕೇಳಿಲ್ಲ, ಆದರೆ ಫಾಸ್ಟ್ ನಾಟಕದ ಇಂಗ್ಲಿಷ್ ರೂಪಾಂತರ ಲೈಸಮ್ ಗೃಹದಲ್ಲಿ ನೋಡಿದ್ದೇನೆ.'

'ಲೈಸಮ್‌ನಲ್ಲಾ? ಇರ್ವಿಂಗ್‌ನ ನಟನೆ ನೋಡಿದ್ದೀರಾ?'

'ಹೌದು ನೀನು ಅವನನ್ನು ನೋಡಿದ್ದೀಯಾ?'

'ಇಲ್ಲ ನಾನು ವೆಸ್ಟ್ ಎಂಡ್ ಥಿಯೇಟರಿಗೆ ಹೋಗೇ ಇಲ್ಲ' ಎಂದು ಹಳಹಳಿಸುತ್ತಾ ನುಡಿದಳು. 'ನಾನು ಎಂದೂ ಇರ್ವಿಂಗ್‌ನ ನೋಡೇ ಇಲ್ಲ. ಅಂಗಡಿಗಳಲ್ಲಿ ಪ್ರದರ್ಶನಕ್ಕಿಟ್ಟ ಭಾವಚಿತ್ರ ಬಿಟ್ಟು ಹೆಚ್ಚಿನದೇನೂ ನೋಡಿಲ್ಲ.'

'ಇರ್ವಿಂಗ್ ಈಗ ಮರ್ಚಂಟ್ ಆಫ್ ವೆನಿಸ್ ನಾಟಕದಲ್ಲಿ ನಟಿಸುತ್ತಿದ್ದಾನೆ. ನಿನ್ನ ತಾಯಿ ಮತ್ತು ನೀನು ಯಾವತ್ತಾದರೂ ಸಾಯಂಕಾಲ ಜೊತೆಗೆ ಬಂದರೆ ನಾನು ನಿಮ್ಮನ್ನು ಸಂತೋಷವಾಗಿ ಕರೆದುಕೊಂಡು ಹೋಗುತ್ತೇನೆ.'

ಮಿಸೆಸ್ ಕ್ಲಿಫರ್ಡ್ ಕೃತಜ್ಞತಾಪೂರ್ವಕವಾಗಿ ಒಪ್ಪಿದರು. 'ನೀವು ಯಾವುದಕ್ಕೆ ಆದ್ಯತೆ ಕೊಡುತ್ತೀರಿ, ಅಪರಾಹ್ನ ಅಥವಾ ಸಾಯಂಕಾಲದ ಆಟಕ್ಕೆ' ಎಂದು ನಾನು ಕೇಳಿದೆ. ಲಂಡನ್ ರಂಗಮಂದಿರಗಳ ಬಗ್ಗೆ ಕೆಲವು ಮಾತುಗಳನ್ನು ಇಲ್ಲಿ ಹೇಳಲೇಬೇಕಿದೆ. ಎಲ್ಲಾ ಪ್ರದರ್ಶನಗಳು ಪ್ರತಿ ರಾತ್ರಿ ರವಿವಾರ ಬಿಟ್ಟು ಅಪರೂಪವೆನ್ನುವಂತೆ ಕೆಲವು ನಾಟಕ ಗೃಹಗಳಲ್ಲಿ ಪ್ರದರ್ಶನವಾಗುತ್ತವೆ. ಕಲ್ಕತ್ತಾದಂತಲ್ಲದೆ ಆಟದ ವಿಷಯ ವಿಮರ್ಶೆ ಆಗುತ್ತದೆ. ಇದಲ್ಲದೆ ಮಧ್ಯಾಹ್ನದ ಆಟಗಳಿಗೆ ಮ್ಯಾಟನಿ ಎಂದೇ ಕರೆಯುತ್ತಾರೆ.

ಬುಧವಾರ ಮತ್ತು ಶನಿವಾರಗಳಂದು ಎರಡು ದಿನ ನಡೆಯುತ್ತದೆ. ಒಂದೊಂದು ಆಟದಲ್ಲಿ ಸ್ವಲ್ಪ ಗಲಾಟೆಯಾಗುತ್ತದೆ. ಒಂದು ಸಾರಿ ಶುರುವಾದರೆ ಪ್ರತಿದಿನ ಪ್ರದರ್ಶನ ಹೆಚ್ಚು ವೀಕ್ಷಕರಿರುವ ವರೆಗೆ ನಡೆಯುತ್ತದೆ. ಕೆಲವು ಎರಡು ತಿಂಗಳು ನಡೆದರೆ ಕೆಲವು ಆರು ತಿಂಗಳು ನಡೆಯುತ್ತವೆ. ಒಂದು ಜನಪ್ರಿಯ ಹಾಸ್ಯ ಭರಿತ ಗೀತರೂಪಕ ಆಟವು ಎರಡು ಅಥವಾ ಮೂರು ವರ್ಷ ಎಡೆಬಿಡದೆ ನಡೆದಿರುವುದುಂಟು.

'ನನಗೆ ನಿಮ್ಮಷ್ಟು ಲಂಡನ್ ರಂಗಮಂದಿರಗಳ ಬಗ್ಗೆ ತಿಳಿದಿಲ್ಲ. ನನ್ನ ಆರೋಗ್ಯ ಸರಿಯಿಲ್ಲ' ಎಂದ ಮಿಸೆಸ್ ಕ್ಲಿಫರ್ಡ್ 'ಮ್ಯಾಟನಿಯೇ ಚೆನ್ನಾಗಿರುತ್ತದೆ, ಮ್ಯಾಗಿಯ ಕಚೇರಿಯ ಕೆಲಸ ಮುಗಿದ ಮೇಲೆ ಶನಿವಾರ ಹೋಗೋಣ' ಎಂದರು.

'ಆಗಲಿ ನಾನು ಸೋಮವಾರ ಹೋಗಿ ಬರುವ ಪ್ರಥಮ ಶನಿವಾರದ ಆಟಕ್ಕೆ ಟಿಕೆಟ್‌ಗಳನ್ನು ತೆಗೆದುಕೊಳ್ಳುತ್ತೇನೆ. ನಾನು ದಿನಾಂಕವನ್ನು ನಿಮಗೆ ಆಮೇಲೆ ತಿಳಿಸುತ್ತೇನೆ' ಎಂದೆ.

'ಗುಪ್ತಾ ಅವರೆ ತುಂಬಾ ದುಬಾರಿ ಟಿಕೆಟು ತೆಗೆದುಕೊಳ್ಳಬೇಡಿ. ನೀವು ಹಾಗೆ ಮಾಡಿದರೆ ನಮಗೆ